# ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ

## ಸಿ.ಸಿ. 5934/2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 2**

**ದಿನಾಂಕಃ** 15.07.2026 **ಸಿಡಬ್ಲ್ಯೂ 3**

| | |
|---|---|
| ಹೆಸರು | ಮಲ್ಲಿಕಾರ್ಜುನ |
| ತಂದೆಯ ಹೆಸರು | ಕರಿಬಸಪ್ಪ |
| ವಯಸ್ಸು | 34 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ16.08.2025 ರಂದು ರೈಲ್ವೆ ಪೋಲೀಸರು ಹರಿಹರದ ರೈಲ್ವೆ ಗೇಟ್ ಹತ್ತಿರ ಒಂದು ಬ್ಯಾಗನ್ನು ತೆಗೆದು ತೋರಿಸಿದ್ದು, ಫೋನ್, ಆಧಾರ ಕಾರ್ಡ, ಪ್ಯಾನ್ ಕಾರ್ಡ್ ತೋರಿಸಿ ಫೋಟೋ ತೆಗೆದು ಸಹಿ ಮಾಡಿಸಿರುತ್ತಾರೆ. ನನ್ನ ಜೊತೆ ಮಲ್ಲಿಕಾರ್ಜುನ ಹಾಗೂ ಪೋಲೀಸರು ಇದ್ದರು. ಸಾಕ್ಷಿಯು ಸ್ಥಳ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.1 ಬಿ ಎಂದು, ಪಂಚನಾಮೆ ಕಾಲಕ್ಕೆ ತೆಗೆದ ಫೋಟೋ ನಿಪಿ.2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ16.08.2025 ರಂದು ನನ್ನನ್ನು ಮತ್ತು ಮಂಜುನಾಥರವರನ್ನು ರೈಲ್ವೆ ಪೋಲೀಸರು ಹರಿಹರ ರೈಲ್ವೆ ನಿಲ್ದಾಣಕ್ಕೆ ಕರೆಸಿರುತ್ತಾರೆ ಎಂದರೆ ಸರಿ. ಅಲ್ಲಿ ಅರುಣ್ ಜಂಬು ಪವಾರ್ ರವರು ಇದ್ದು ದಿಃ14.08.2025 ರಂದು ಇಂಡಿಯಿಂದ ಯಶವಂತಪುರಕ್ಕೆ ಗೋಲಗುಂಬಜ್ ಎಕ್ಸ್ ಪ್ರೆಸ್ ರೈಲುಗಾಡಿಯಲ್ಲಿ ಹೋಗುತ್ತಿರುವಾಗ ತಮ್ಮ ಬ್ಯಾಗ್ ಗಳನ್ನು ಇಟ್ಟು ಮಲಗಿಕೊಂಡಿದ್ದು ನಂತರ ಬ್ಯಾಗಗಳು ಕಾಣದೇ ಇದ್ದಾಗ ಅಕ್ಕಪಕ್ಕ ವಿಚಾರಿಸಿದಾಗ, ಚಲಿಸುತ್ತಿದ್ದ ರೈಲುಗಾಡಿಯಲ್ಲಿ ಒಬ್ಬ ವ್ಯಕ್ತಿ ವೆನ್ಟಿಟಿಬ್ಯಾಗನ್ನು ಹಿಡಿದುಕೊಂಡು ಹೋಗುತ್ತಿದ್ದನು. ನಂತರ ಸದರಿ ವಿಷಯವನ್ನು ಪೋಲೀಸರಿಗೆ ತಿಳಿಸಿದಾಗ ಪೋಲೀಸರು ಅವನಿಂದ ಒಂದು ಸಣ್ಣ ಬಂಗಾರದ ಮಾಂಗಲ್ಯ ಸರ, ಮಾಂಗಲ್ಯ ಸರ, ಒಂದು ಜೊತೆ ಬಂಗಾರದ ಕಿವಿ ಓಲೆಸಿ, ಕೈ ಉಂಗುರಗಳು, ಬಂಗಾರದ ನೆಕ್ಲೆಸ್, ಒಂದು ಜೊತೆ ಸೈಡ್ ಮಾಟಿ, ಕಳ್ಳತನವಾಗಿದ್ದವು. ಆ ಸ್ಥಳ ಇದೇ ಎಂದು ತೋರಿಸಿರುತ್ತಾನೆ ಎಂದರೆ ಸರಿ. ಅಲ್ಲಿ ಪೋಲೀಸರು ಬೆಳಗ್ಗೆ 11.30 ರಿಂದ 12.30 ಗಂಟೆವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಇ ಎಸ್ ಐ ವಕೀಲರಿಂದಃ

ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲೀಸರು ಸಹಿ ಮಾಡು ಅಂತ ಹೇಳಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಪೋಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.